**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿರವರ ನಿಯಮ-72ರ ಅಡಿಯಲ್ಲಿ ಉತ್ತರ ಸಲ್ಲಿಸುವ ಬಗ್ಗೆ.**

**ವಿಷಯ**

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಸೇರಿದ ಸರ್ಕಾರಿ ಕಿವುಡ ಮಕ್ಕಳ ಶಾಲೆಯ ವಿಶೇಷ ಶಿಕ್ಷಕರಿಗೆ ಪಿಂಚಣಿ ನೀಡಲು ಸಚಿವ ಸಂಪುಟವು ದಿನಾಂಕ:06.01.2022ರಂದು ಅನುಮೋದನೆ ನೀಡಿದ್ದು, ದಿನಾಂಕ:17.02.2022 ರಂದು ಆದೇಶ ಹೊರಡಿಸಲಾಗಿದೆ. ಸರ್ಕಾರದ ಆದೇಶದ ಪ್ರಕಾರ ವಿಲೀನಾತಿ ನಿಯಮಗಳನ್ನು ರೂಪಿಸಿ, ಜೇಷ್ಠತೆಯನ್ನು ನಿಗದಿಪಡಿಸಿರುವುದಿಲ್ಲ. ಮಾನ್ಯ ಸಚಿವರು ಸಂಖ್ಯೆ: ಮಮಇ 214 ಪಿಹೆಚ್‌ಪಿ 2022ರಲ್ಲಿ ಶೀಘ್ರವಾಗಿ ಜೇಷ್ಠತೆಯನ್ನು ನಿಗದಿಗೊಳಿಸಿ ಪಿಂಚಣಿ ನೀಡುವುದಾಗಿ ಸದನದಲ್ಲಿ ಭರವಸೆ ನೀಡಿರುತ್ತಾರೆ. ಅದರೆ ಮಾನ್ಯ ಸಚಿವರ ಭರವಸೆಯಂತೆ ಇದುವರೆಗೂ ಜೇಷ್ಠತೆಯನ್ನು ನಿಗದಿಗೊಳಿಸಿರುವುದಿಲ್ಲ. ಕಳೆದ 7 ವರ್ಷಗಳಿಂದ ಇಲಾಖೆಯ ಅಧಿಕಾರಿಗಳ ಬೇಜವಾಬ್ದಾರಿ ಮತ್ತು ಉದಾಸೀನತೆಯಿಂದ ನಿವೃತ್ತ ವಿಶೇಷ ಶಿಕ್ಷಕರಿಗೆ ತುಂಬಾ ತೊಂದರೆಯಾಗಿದ್ದು, ಇನ್ನೆಷ್ಟು ದಿನಗಳಲ್ಲಿ ಜೇಷ್ಠತೆಯನ್ನು ನಿಗದಿಗೊಳಿಸಿ ಪಿಂಚಣಿ ನೀಡಲಾಗುವುದೆಂಬ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ: ಮಮಇ 389 ಪಿಹೆಚ್‌ಪಿ 2014, ಬೆಂಗಳೂರು, ದಿನಾಂಕ:23.07.2016ರಲ್ಲಿ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರ ವಹಿಸಿಕೊಳ್ಳಲು ಇರುವ ಎಲ್ಲಾ ನಿಯಮಗಳನ್ನು ಪಾಲಿಸಿ ಸರ್ಕಾರದ ವಶಕ್ಕೆ ಪಡೆದು ಹಾಲಿ ಇರುವ ಸಿಬ್ಬಂದಿಗಳ ಸಮೇತ, ಚರ, ಸ್ಥಿರ ಆಸ್ತಿಗಳನ್ನೊಳಗೊಂಡಂತೆ **ಸರ್ಕಾರಿ ವಸತಿಯುತ ಶಾಲೆಯನ್ನಾಗಿ ನಿಯಮಾನುಸಾರ ಮಾರ್ಪಡಿಸಲು ಮಂಜೂರಾತಿಯನ್ನು ನೀಡಲಾಗಿದೆ.**

**ಸರ್ಕಾರದ ಆದೇಶ ಸಂಖ್ಯೆ: ಮಮಇ 142 ಪಿಹೆಚ್‌ಪಿ 2021, ಬೆಂಗಳೂರು ದಿನಾಂಕ:17.02.2022**ರನ್ವಯ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಸಿಬ್ಬಂದಿಗಳಿಗೆ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ನೀಡುವ ಸಲುವಾಗಿ ಈಗಾಗಲೇ ನೇಮಕಗೊಂಡಿರುವ ಸಿಬ್ಬಂದಿಗಳ ನೇಮಕಾತಿಯಲ್ಲಿ ಒಂದು ಬಾರಿಗೆ ರೋಸ್ಟರ್ ಅಳವಡಿಸಿರುವುದರಿಂದ ವಿನಾಯತಿ ನೀಡಿ, ನಿಯಮಾನುಸಾರ ಪರಿಶೀಲಿಸಿ, ನಿವೃತ್ತಿ ಮತ್ತು ಇತರೇ ಸೌಲಭ್ಯಗಳನ್ನು ನೀಡುವಂತೆಯೂ, ಮುಂದೆ ನೇಮಕ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ರೋಸ್ಟರ್‌ಗಳನ್ನು ಅಳವಡಿಸಿ ಸರ್ಕಾರದ ಪೂರ್ವಾನುಮತಿಯನ್ನು ಪಡೆದು ನೇಮಕಾತಿ ಮಾಡಿಕೊಳ್ಳುವಂತೆ ಆದೇಶಿಸಿದೆ.

ಸರ್ಕಾರದ ವಶಕ್ಕೆ ಪಡೆದಂತಹ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಯಲ್ಲಿ ನಿವೃತ್ತಿ ಹೊಂದಿದ 06 ಸಿಬ್ಬಂದಿಗಳ ಮೂಲ ಸೇವಾವಹಿಗಳನ್ನು ಪಿಂಚಣಿ ಇತರೆ ಸೌಲಭ್ಯಗಳನ್ನು ಒದಗಿಸಲು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ದಿನಾಂಕ:20.09.2017ರಂದು ಸಲ್ಲಿಸಲಾಗಿರುತ್ತದೆ.

ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ನಿವೃತ್ತ ಸಿಬ್ಬಂದಿಯಾದ ಶ್ರೀಮತಿ ಶೀಲಿ ಎಸ್. ಇವರಿಗೆ ಈಗಾಗಲೇ ಪಿಂಚಣಿ ಸೇವಾ ಸೌಲಭ್ಯದ ಆದೇಶವು ದಿನಾಂಕ:07.07.2022ರಂದು ಮಹಾಲೇಖಪಾಲರ ಕಛೇರಿಯಿಂದ ಮಂಜೂರಾತಿಯಾಗಿರುತ್ತದೆ.

ಅದರಂತೆ ಉಳಿದ ನಿವೃತ್ತ ಸಿಬ್ಬಂದಿಗಳಿಗೂ ಸಹ ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ಮಂಜೂರು ಮಾಡಲು ಮಹಾಲೇಖಪಾಲರ ಕಛೇರಿಗೆ ದಿನಾಂಕ:12.09.2022 ಮತ್ತು ದಿನಾಂಕ:11.10.2022ರಂದು ಪತ್ರವನ್ನು ಬರೆಯಲಾಗಿರುತ್ತದೆ. ಮಹಾಲೇಖಪಾಲರ ಕಛೇರಿಯಿಂದ ನಿವೃತ್ತ ಸಿಬ್ಬಂದಿಗಳಿಗೆ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಮಂಜೂರಾತಿ ಸಂಬಂಧ ಕೆಲವು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದು ಅವುಗಳನ್ನು ಸರಿಪಡಿಸಿ ಪ್ರಸ್ತಾವನೆಗಳನ್ನು ಮರು ಸಲ್ಲಿಸಲಾಗಿರುತ್ತದೆ.

ಇಲಾಖೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ದಿನಾಂಕ:01.04.2004ರಲ್ಲಿ ಜಾರಿಗೆ ಬಂದಿದ್ದು, ಸದರಿ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ನಿರ್ದೇಶನಾಲಯಕ್ಕೆ ಕೆಲವು ಮಾಹಿತಿ/ವಿವರಗಳೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ.

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ವೃಂದ ನೇಮಕಾತಿ ನಿಯಮಗಳನ್ನು ರಚಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಸದರಿ ನಿಯಮಾವಳಿಗಳಲ್ಲಿಯೂ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ವಿಶೇಷ ಶಿಕ್ಷಕರಿಗೆ ವಿಲೀನಾತಿ ನಿಯಮಗಳನ್ನು ರೂಪಿಸಿ ಜೇಷ್ಠತೆಯನ್ನು ನಿಗಧಿ ಪಡಿಸಲು ಕ್ರಮ ವಹಿಸಲಾಗುವುದು.

**ಸಂಖ್ಯೆ: ಮಮಇ 261 ಪಿಹೆಚ್‌ಪಿ 2022**

Halappa

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರದ ವಶಕ್ಕೆ ಪಡೆದು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸುವ ಬಗ್ಗೆ.

ಓದಲಾಗಿದೆ:
1. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ವಿಹಿನಾ ಸಇ:ಇಸಿ-8/ಹಂಸಧ್ವನಿ:ಭಾಗ-3:2014-152347,ದಿ:17-10-2015.
2. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಪತ್ರ ಸಂಖ್ಯೆ:ಉನಿಬೆಂ/ನ/ಅಂಕವಿ/2016-17/47, ದಿನಾಂಕ:18.4.2016.
3. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ವಿಹಿನಾ ಸಇ/ಇಸಿ/ಸಿ1/ಹಂಸ/24/2015-16/300, ದಿ:26-04-2016.
4. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 166 ವೆಚ್ಚ-10/2016, ದಿನಾಂಕ:17.6.2016.

<u>ಪ್ರಸ್ತಾವನೆ:</u>

ಸರ್ಕಾರದ ಆದೇಶ ಸಂ:ಕಂಇ:64:ಮುನೋಸೋ:2015, ಬೆಂ, ದಿ:09.07.2015ರಲ್ಲಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ಡಬ್ಲೂಪಿ ಸಂಖ್ಯೆ:43965/2012, ದಿನಾಂಕ:12.6.2015ರ ಆದೇಶದನ್ವಯ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ವಸತಿರಹಿತ ಶಾಲೆಗೆ ಆಡಳಿತಾಧಿಕಾರಿ ನೇಮಿಸಿದ್ದು, ಶಾಲೆಯ ಆಡಳಿತಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ, ಬೆಂಗಳೂರು ರವರು ವರದಿಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

1. ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ವಸತಿರಹಿತ ಶಾಲೆಯನ್ನು ನಂ.32, ಹಳೆಬಿನ್ನಮಂಗಲ, ಬೆಂಗಳೂರು ಉತ್ತರ, ತಾ: ಬೆಂಗಳೂರು ಈ ವಿಳಾಸದಲ್ಲಿ ನಡೆಸಲು ನ್ಯಾಶಿಯೋ ಸಂಸ್ಥೆಗೆ ವೇತನಾನುದಾನವನ್ನು ಮಾತ್ರ ಸರ್ಕಾರದ ಆದೇಶ ಸಂಖ್ಯೆ:ಸಕಕಾ:28:ಪಿಹೆಚ್‌ಪಿ:88, ಬೆಂಗಳೂರು ದಿ:26.03.1988ರಲ್ಲಿ ಅನುಮತಿ ನೀಡಲಾಗಿರುತ್ತದೆ. ಸದರಿ ಸಂಸ್ಥೆಗೆ ಸರ್ಕಾರವು ನಂ.32, ಬಿನ್ನಮಂಗಲ ವಿಲೇಜ್, ಡಿವಿಷನ್ ನಂ.80, ಬೆಂಗಳೂರು ಈ ವಿಳಾಸದಲ್ಲಿ, ಆಡಳಿತಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿಗಳ ಪತ್ರಸಂ:ಸಿಬ್ಬಂದಿ(1):ಸಿಆರ್:09:2015-16 ದಿ:18.08.2015 ರಲ್ಲಿ 2 ಎಕರೆ 13 ಗುಂಟೆ ವಿಸ್ತೀರ್ಣವುಳ್ಳ ನಿವೇಶನವನ್ನು ಉಚಿತವಾಗಿ ವಿಕಲಚೇತನ ಮಕ್ಕಳಿಗಾಗಿ ವಿಶೇಷ ಶಾಲೆಯನ್ನು ನಡೆಸುವ ಕಾರ್ಯಕ್ಕಾಗಿ ಮಂಜೂರು ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ.
2. ಸದರಿ ಸಂಸ್ಥೆಯನ್ನು ದಿ.ಶ್ರೀಮತಿ ಲಕ್ಷ್ಮಿ ನಿಜಾಮುದ್ದೀನ್ ರವರ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಯನ್ನು ಸ್ಥಾಪಿಸಿ ಕಾರ್ಯನಿರ್ವಹಿಸಲಾಗುತ್ತಿತ್ತು. 2006ರಲ್ಲಿ ಶ್ರೀಮತಿ ಲಕ್ಷ್ಮಿ ನಿಜಾಮುದ್ದೀನ್‌ರವರು ನಿಧನರಾದ ನಂತರ ಅವರ ಪತಿಯವರಾದ ನಿವೃತ್ತ ಪೋಲೀಸ್ ಅಧಿಕಾರಿಯಾದ ಶ್ರೀ ನಿಜಾಮುದ್ದೀನ್ ರವರ ನೇತೃತ್ವದಲ್ಲಿ ಇತರೆ ಆಡಳಿತ ಮಂಡಳಿ ಸದಸ್ಯರೊಂದಿಗೆ ಕಾರ್ಯನಿರ್ವಹಿಸಲಾಗುತ್ತಿತ್ತು. ಶ್ರೀ ನಿಜಾಮುದ್ದೀನ್ ರವರು ಜುಲೈ-2015 ರಲ್ಲಿ ನಿಧನರಾಗಿರುತ್ತಾರೆ. ಈ ಮಧ್ಯೆ ಇತರೆ ಆಡಳಿತ ಮಂಡಳಿ ಸದಸ್ಯರೂ ಸಹ ನಿಧನರಾಗಿರುತ್ತಾರೆ.

..2

(6)

[illegible] 2015 ಮಾರ್ಚ್ [illegible]
3. ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಸಿಬ್ಬಂದಿಗಳಿಗೆ [illegible] ಬ್ಯಾಂಕ್ ಮೂಲಕ ಸಿಬ್ಬಂದಿಗಳಿಗೆ ವೇತನ [illegible] ವೇತನಾನುದಾನವನ್ನು ನೀಡಲಾಗಿದ್ದು, ಈ ಅನುದಾನವು ಈ ಅನುದಾನವನ್ನು ಸಿಬ್ಬಂದಿಯವರ ವೇತನಕ್ಕಾಗಿ ನೀಡಲಾಗಿದ್ದು, ದುರುಪಯೋಗವಾಗಿರುವುದಿಲ್ಲ.

4 ಪ್ರಸ್ತುತ ಸದರಿ ಸಂಸ್ಥೆಯಲ್ಲಿ ಈ ಕೆಳಕಂಡ ತರಗತಿಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಇರುತ್ತದೆ.

| ಕ್ರಸಂ | ತರಗತಿಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1. | 1ನೇ ತರಗತಿ | 08 |
| 2. | 2ನೇ ತರಗತಿ | 05 |
| 3. | 03ನೇ ತರಗತಿ | 08 |
| 4. | 04ನೇ ತರಗತಿ | 08 |
| 5. | 05ನೇ ತರಗತಿ | 08 |
| 6. | 06ನೇ ತರಗತಿ | 08 |
| 7. | 07ನೇ ತರಗತಿ | 08 |
| 8 | 08ನೇ ತರಗತಿ | 07 |
| 9 | 09ನೇ ತರಗತಿ | 08 |
| 10 | 10ನೇ ತರಗತಿ | 04 |
| | ಒಟ್ಟು | 72 |

5. ಸದರಿ ಶಾಲೆಯಲ್ಲಿ ಪ್ರಸ್ತುತ ಈ ಕೆಳಕಂಡ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

| ಕ್ರಸಂ | ಸಿಬ್ಬಂದಿ ಹೆಸರು<br>ಶ್ರೀ / ಶ್ರೀಮತಿ | ಹುದ್ದೆ |
|---|---|---|
| 1. | ಕೋಮಲಾ ಮಹೇಶ್ | ಸಹ ಶಿಕ್ಷಕಿ |
| 2. | ಮರ್ಸಿಲಿನಾ | ಸಹ ಶಿಕ್ಷಕಿ |
| 3. | ಸುಮತಿ | ಸಹ ಶಿಕ್ಷಕಿ |
| 4. | ಮಂಜುಳಾ | ಸಹ ಶಿಕ್ಷಕಿ |
| 5. | ರೂಬಿ ಡೈಸಿ ರಾಣಿ | ಸಹ ಶಿಕ್ಷಕಿ |
| 6. | ಶೀಲಿ ಎಸ್ | ಸಹ ಶಿಕ್ಷಕಿ |
| 7. | ವಿಜಯಕುಮಾರಿ | ಸಹ ಶಿಕ್ಷಕಿ |
| 8. | ನಫೀಸಾ ಸುಲ್ತಾನ | ಸಹ ಶಿಕ್ಷಕಿ (ಅಮಾನತ್ತಿನಲ್ಲಿರುತ್ತಾರೆ) |
| 9. | ಶಿವಣ್ಣ ಆರ್ | ಸಹ ಶಿಕ್ಷಕ |
| 10. | ಭವಾನಿ ಪಿ. | ಸಹ ಶಿಕ್ಷಕಿ ದಿ:31.03.14 ರಂದು ವಯೋ ನಿವೃತ್ತಿ |
| 11. | ಯೋಗಮೂರ್ತಿ | ಕಚೇರಿ ಸಹಾಯಕರು |
| 12. | ವೇಡಿಯಮ್ಮ | ಆಯಾ |
| | ಒಟ್ಟು | 12 ಸಿಬ್ಬಂದಿಗಳು |

6. ಸದರಿ ಸಂಸ್ಥೆಯಲ್ಲಿ ಒಟ್ಟು 9000 ಚದರಡಿಗಳ ವಿಸ್ತೀರ್ಣದ ಶಾಲಾ ಕಟ್ಟಡವಿರುತ್ತದೆ.

7. ಸದರಿ ಸಂಸ್ಥೆಯ ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ರಾಧಾಮಣಿ ಹಾಗೂ ಗುಮಾಸ್ತೆ ಶ್ರೀಮತಿ ನಿರ್ಮಲರವರ ಮೇಲೆ ಸಾರ್ವಜನಿಕ ವಂತಿಗೆ ಸ್ವೀಕರಿಸಿದ ಹಣ ದುರುಪಯೋಗ ಮತ್ತು ಕ್ಷೀಣಿಸುತ್ತಿರುವ ಆಡಳಿತ ಮಂಡಳಿಯ ವಿರುದ್ಧ ಸಾರ್ವಜನಿಕರು ದೂರನ್ನು ಸಲ್ಲಿಸಿರುತ್ತಾರೆ. ಇದೇ ರೀತಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿಯೂ ಸಹ ಸಾರ್ವಜನಿಕ ಹಿತಾಸಕ್ತಿ ಪ್ರಕರಣವನ್ನು ದಾಖಲಿಸಲಾಗಿರುತ್ತದೆ.

ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ವಸತಿರಹಿತ ಶಾಲೆ, ಬೆಂಗಳೂರು ನಗರ ಜಿಲ್ಲೆ, ಇದರ ಆಸ್ತಿ ಮತ್ತು ಋಣ ಪಟ್ಟಿಗಳ (Assets and Liabilities) ವಿವರಗಳನ್ನು ಮತ್ತು ಸಿಬ್ಬಂದಿಗಳ ಮತ್ತು ಮಕ್ಕಳ ವಿವರ ವಸತಿರಹಿತ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾಡಿದ್ದಲ್ಲಿ ತಗಲಬಹುದಾದ ಖರ್ಚು ವೆಚ್ಚಗಳ ಬಗ್ಗೆ ಬೆಂಗಳೂರು ನಗರ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಂದ ಮಾಹಿತಿ ಪಡೆದು ನೀಡಲಾಗಿದೆ.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಸದರಿ ಶಾಲೆಗೆ ಸಂಬಂಧಿಸಿದಂತೆ ಆಸ್ತಿ ಮತ್ತು ಋಣಭಾರ, ಪ್ರಸ್ತುತ ಸಿಬ್ಬಂದಿಗಳ ಮತ್ತು ವಿದ್ಯಾರ್ಥಿಗಳ ವಿವರ ಹಾಗೂ ವಸತಿಯುತ ಶಾಲೆಯನ್ನಾಗಿ ಪರಿವರ್ತಿಸುವ ಕುರಿತು ವಿವರವಾದ ಪ್ರಸ್ತಾವನೆಯನ್ನು ನೀಡಿರುತ್ತಾರೆ. ಸದರಿ ಶಾಲೆಯ ಆಸ್ತಿ ವಿವರವನ್ನು ಮತ್ತು ವಸತಿಯುತ ಶಾಲೆಯಾಗಿ ಪರಿವರ್ತಿಸಿದಲ್ಲಿ ಅಗತ್ಯವಿರುವ ಆವರ್ತಕ ಮತ್ತು ಅನಾವರ್ತಕ ವೆಚ್ಚದ ವಿವರಗಳನ್ನು ಈ ಮುಂದಿನಂತೆ ಒದಗಿಸಲಾಗಿದೆ.

ಹಂಸಧ್ವನಿ ಶಾಲೆಯಲ್ಲಿರುವ ಆಸ್ತಿ ವಿವರ:

1. 2 ಎಕರೆ 13 ಗುಂಟೆ ಜಮೀನು.
2. ಈ ಜಮೀನಿನಲ್ಲಿ 9000 ಸಾವಿರ ಚದುರ ಅಡಿ ವಿಸ್ತೀರ್ಣದ 2 ಅಂತಸ್ತಿನ ಕಟ್ಟಡವಿರುತ್ತದೆ.
3. ಶಾಲೆಯಲ್ಲಿ ಒಟ್ಟು 35 ಕೊಠಡಿಗಳಿರುತ್ತದೆ.
4. ವಿದ್ಯುತ್ ಮತ್ತು ನೀರಿನ ಸಂಪರ್ಕವಿರುತ್ತದೆ.
5. 13-ಸಂಖ್ಯೆ ಸ್ಟೀಲ್ ಬೀರುಗಳು.
6. 13-ಸಂಖ್ಯೆಯ ಕಂಪ್ಯೂಟರ್ ಸಿಸ್ಟಮ್ಸ್ (ದುರಸ್ತಿಯಲ್ಲಿವೆ)
7. 50-ಮಕ್ಕಳು ಕುಳಿತುಕೊಳ್ಳುವ ಬೆಂಚುಗಳು.
8. 22-ಬೀರುಗಳು, 10-ಟೇಬಲ್‌ಗಳು.
9. 13-ಸ್ಟೀಲ್ ಅಲ್ಮೆರಾ, 2- ವಾಲ್ ಕ್ಲಾಕ್‌ಗಳು.
10. 6-ಟೈಲರಿಂಗ್ ಯಂತ್ರಗಳು.

ಉಳಿದಂತೆ ಸದರಿ ಶಾಲೆಗೆ ಸಂಬಂಧಿಸಿದ ಮಾಹಿತಿಯು ಈ ಕೆಳಕಂಡಂತಿದೆ.

- ಹಂಸಧ್ವನಿ ಕಿವುಡ ಮಕ್ಕಳ ಶಾಲೆಯ ಉದ್ದೇಶಕ್ಕಾಗಿ ನ್ಯಾಶಿಯೋ ಸಂಸ್ಥೆಗೆ 2 ಎಕರೆ 13 ಗುಂಟೆ ಜಮೀನನ್ನು ಮಂಜೂರು ಮಾಡಲಾಗಿದೆ.
- ಶಾಲೆಯನ್ನು 9000 ಚದುರ ಅಡಿ ವಿಸ್ತೀರ್ಣದ ಕಟ್ಟಡವನ್ನು ನಿರ್ಮಿಸಲಾಗಿದೆ. ನೆಲಮಹಡಿಯಲ್ಲಿ 14-ಕೊಠಡಿಗಳು, 1ನೇ ಮಹಡಿಯಲ್ಲಿ 14-ಕೊಠಡಿಗಳು, 3-ಶೌಚಾಲಯಗಳು, 1-ವಾಚನಾಲಯ, 1-ಆಡಿಯೋ ಲ್ಯಾಬ್, 1-ಪ್ರಯೋಗಾಲಯ ಹಾಗೂ 1- ಕಂಪ್ಯೂಟರ್ ರೂಂ ಇದ್ದು, ವಿದ್ಯುತ್, ನೀರಿನ ಸಂಪರ್ಕ ಇರುತ್ತದೆ.
- ಶಾಲೆಯ ಪೂರ್ವ ಪಶ್ಚಿಮಕ್ಕೆ ಮಕ್ಕಳಿಗೆ ಆಟದ ಮೈದಾನದ ವ್ಯವಸ್ಥೆ ಇರುತ್ತದೆ.
- ಹಂಸಧ್ವನಿ ಶಾಲೆಯ ಹೆಸರಿನಲ್ಲಿ ಆಸ್ತಿಯಿದ್ದು, ಕಂದಾಯ ಇಲಾಖೆಯಿಂದ ಪಡೆದಿರುವ ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣ ಪತ್ರದ ಪ್ರಕಾರ ಸದರಿ ಆಸ್ತಿಯ ಮೇಲೆ ಯಾವುದೇ ಋಣಭಾರ ಇರುವುದಿಲ್ಲ.
- ಸದರಿ ಶಾಲೆಯಲ್ಲಿ 1 ರಿಂದ 10ನೇ ತರಗತಿವರೆಗಿದ್ದು, ಒಟ್ಟು 72 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ.
- ಸದರಿ ಶಾಲೆಗೆ 16 ಶಿಕ್ಷಕರು ಮತ್ತು 4 ಶಿಕ್ಷಕೇತರರು ಒಟ್ಟು 20 ಹುದ್ದೆಗಳಿಗೆ ಸರ್ಕಾರವು ಅನುದಾನ ಮಂಜೂರಾತಿ ನೀಡಿದೆ.

8. ಸಾರ್ವಜನಿಕರು ನೀಡಿದ್ದ ದೂರನ್ನು ಆಧರಿಸಿ ಸಾರ್ವಜನಿಕರಿಂದ ಸಂಗ್ರಹಿಸಿದ ವಂತಿಗೆ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಪ್ರಭಾರ ಮುಖ್ಯೋಪಾಧ್ಯಾಯಿನಿಯಾದ ಶ್ರೀಮತಿ ರಾಧಾಮಣಿ ಮತ್ತು ಶ್ರೀಮತಿ ನಿರ್ಮಲ, ಗುಮಾಸ್ತರವರನ್ನು ಸೇವೆಯಿಂದ ವಜಾ ಮಾಡಲಾಗಿದೆ.
9. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿ ಘನ ನ್ಯಾಯಾಲಯವು ಸದರಿ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸಲು ಹಾಗೂ ಆಡಳಿತಾಧಿಕಾರಿಗಳು ಸದರಿ ಸಂಸ್ಥೆಯ ನಿರ್ವಹಣೆಯಲ್ಲಿ ಕಂಡು ಬಂದಿರುವ ಲೋಪದೋಷಗಳನ್ನು ಆಧರಿಸಿ ಕಾನೂನಿನ ಪ್ರಕಾರ ಸೂಕ್ತ ಕ್ರಮವಹಿಸಲು ಸೂಚಿಸಿದೆ.
10. ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಸರ್ಕಾರವು ಸರ್ಕಾರದ ಆದೇಶ ಸಂ:ಕಂಇ:64:ಮುನೋಸೋ:2015, ಬೆಂ, ದಿ:09.07.2015ರಂತೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ, ಬೆಂಗಳೂರು ರವರನ್ನು ಆಡಳಿತಾಧಿಕಾರಿಯನ್ನಾಗಿ ದಿ:09.07.2015 ರಿಂದ ಮುಂದಿನ ಆರು ತಿಂಗಳ ಅವಧಿಗೆ ನೇಮಿಸಿ ಆದೇಶ ಹೊರಡಿಸಲಾಗಿತ್ತು.
11. ಅದರಂತೆ ಆಡಳಿತಾಧಿಕಾರಿಗಳು ಸದರಿ ಸಂಸ್ಥೆಯನ್ನು ಪರಿಶೀಲಿಸಿ ಸದರಿ ಶಾಲೆಯ ಆಡಳಿತ ಮಂಡಳಿಯು ನಿಷ್ಕ್ರಿಯಗೊಂಡಿರುವುದರಿಂದ ಮತ್ತು ಯಾವುದೇ ಸದಸ್ಯರು ಇಲ್ಲದಿರುವ ಪ್ರಯುಕ್ತ ಹಾಗೂ ಶಾಲೆಯು ನಗರದ ಕೇಂದ್ರ ಸ್ಥಳದಲ್ಲಿ ಅತಿ ಬೆಲೆಬಾಳುವ ಆಸ್ತಿಯನ್ನು ಹೊಂದಿರುವುದರಿಂದ ಸಂಸ್ಥೆಯ ಸ್ವತ್ತನ್ನು ಮತ್ತು ಅಂಗವಿಕಲ ಮಕ್ಕಳ ವಿದ್ಯಾಭ್ಯಾಸಕ್ಕೆ ಉಳಿಸಬೇಕೆಂದು ಸಮರ್ಥಿಸಿರುತ್ತಾರೆ. ಸದರಿ ಶಾಲೆಯ ಸಿಬ್ಬಂದಿ ವರ್ಗದವರಿಗೆ ಸರ್ಕಾರವೇ ವೇತನ ಮತ್ತು ಇತರೆ ಭತ್ಯೆಗಳನ್ನು ನೀಡುತ್ತಿರುವುದರಿಂದ ಸದರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ 72 ವಿವಿಧ ನ್ಯೂನತೆಯುಳ್ಳ ಮಕ್ಕಳ ಶಿಕ್ಷಣವನ್ನು ಸರ್ಕಾರವೇ ಸದರಿ ಸಂಸ್ಥೆಯನ್ನು ವಹಿಸಿಕೊಂಡು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡುವುದು ಸೂಕ್ತವೆಂದು ತಿಳಿಸಿರುತ್ತಾರೆ. ಮುಂದುವರೆದು, ಸದರಿ ಸಂಸ್ಥೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.
12. ಸಂಸ್ಥೆಯು ಪ್ರಸ್ತುತ ವಾಸ್ತವಿಕ ಪರಿಸ್ಥಿತಿಯನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಹೊರಹೊಮ್ಮುತ್ತವೆ.
    ಅ) ಪ್ರಸ್ತುತ ಸಂಸ್ಥೆಯು ಯಾವುದೇ ಆಡಳಿತ ಮಂಡಳಿಯನ್ನು ಹೊಂದಿರುವುದಿಲ್ಲ.
    ಆ) ಆಡಳಿತ ಮಂಡಳಿಯ ಸದಸ್ಯರಿರುವವರೆಗೂ ವೇತನಾನುದಾನವನ್ನು ಬಿಡುಗಡೆ ಮಾಡಿ ನಿಯಮಾನುಸಾರ ನಿರ್ವಹಿಸಲಾಗಿರುತ್ತದೆ.
    ಇ) ಸದರಿ ಸಂಸ್ಥೆಯು ನಗರದ ಕೇಂದ್ರ ಸ್ಥಳದಲ್ಲಿದ್ದು ಅತಿ ಬೆಲೆಬಾಳುವ ಆಸ್ತಿಯನ್ನು ಹೊಂದಿರುತ್ತದೆ.
    ಈ) ಸದರಿ ಸಂಸ್ಥೆಯಲ್ಲಿ ವಿವಿಧ ನ್ಯೂನತೆಯುಳ್ಳ ಮಕ್ಕಳು ವ್ಯಾಸಂಗ ಮಾಡುತ್ತಿರುವುದರಿಂದ ಅವರಿಗೆ ಶಿಕ್ಷಣವನ್ನು ಮುಂದುವರೆಸಲು ಸದರಿ ಸಂಸ್ಥೆಯಲ್ಲಿಯೇ ಅವಕಾಶ ಮಾಡಿಕೊಡುವುದು ಅವಶ್ಯಕವಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸರ್ಕಾರವೇ ಸದರಿ ಸಂಸ್ಥೆಯನ್ನು ನಿರ್ವಹಣೆ ಮಾಡುವುದು ಸೂಕ್ತವೆಂಬ ಅಭಿಪ್ರಾಯಪಡಲಾಗಿದೆ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲ ಮತ್ತು ಕೋಟ್ಯಾಂತರ ರೂಪಾಯಿ ಆಸ್ತಿಯು ಸರ್ಕಾರದಲ್ಲಿ ಉಳಿದಂತಾಗುತ್ತದೆ.

ಗೌರವಾನ್ವಿತ ಉಚ್ಚ ನ್ಯಾಯಾಲಯದ ತೀರ್ಪು ಮತ್ತು ಸಂಸ್ಥೆಯ ಪ್ರಸ್ತುತ ಆಡಳಿತಾಧಿಕಾರಿಯವರ ಶಿಫಾರಸ್ಸನ್ನು ಆಧರಿಸಿ, ಸಂಪೂರ್ಣ ಶಾಲೆಯನ್ನು ಸರ್ಕಾರವು ವಹಿಸಿಕೊಂಡು ನಿರ್ವಹಿಸಬಹುದೆಂಬ ಅಭಿಪ್ರಾಯದೊಂದಿಗೆ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ:17.10.2015ರ ಪತ್ರದಲ್ಲಿ ಕೋರಿರುತ್ತಾರೆ.

- ಪ್ರಸ್ತುತ ಶಾಲೆಯಲ್ಲಿ 12 ಸಿಬ್ಬಂದಿಗಳು ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಾರೆ.

**ಹಂಸಧ್ವನಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಪರಿವರ್ತಿಸಲು ಅಗತ್ಯವಿರುವ ಆವರ್ತಕ ಮತ್ತು ಅನಾವರ್ತಕ ಆಯವ್ಯಯ ಅಂದಾಜು ಪಟ್ಟಿ.**

| ಕ್ರಸಂ | ಆವರ್ತಕ ವೆಚ್ಚದ ವಿವರ | ರೂ.ಲಕ್ಷಗಳಲ್ಲಿ |
|---|---|---|
| 1. | 2–ನಿಲಯಪಾಲಕರು, 1– ಅಡುಗೆಯವರು, 2–ಸಹಾಯಕ ಅಡುಗೆಯವರು, 1–ಅಟೆಂಡರ್, 1–ವಾಚ್‌ಮೆನ್) ಬಾಹ್ಯ ಮೂಲದಿಂದ ಭರ್ತಿ ಮಾಡಲು | 8.00 |
| 2. | ಉಪಹಾರ ವೆಚ್ಚ(100ಜನ ವಿದ್ಯಾರ್ಥಿಗಳಿಗೆ 10 ತಿಂಗಳಿಗೆ) | 30.00 |
| 3. | ಸಮವಸ್ತ್ರ ವೆಚ್ಚ(100ಜನ ವಿದ್ಯಾರ್ಥಿಗಳಿಗೆ ವರ್ಷಕ್ಕೆ 2 ಜೊತೆ) | 4.00 |
| 4. | ವೈದ್ಯಕೀಯ ವೆಚ್ಚ | 1.00 |
| 5. | ಕಛೇರಿ ಹಾಗೂ ಸಾದಿಲ್ವಾರು ವೆಚ್ಚ | 2.00 |
| | ಒಟ್ಟು | 45.00 |

| ಕ್ರಸಂ | ಅನಾವರ್ತಕ ವೆಚ್ಚದ ವಿವರ | ರೂ.ಲಕ್ಷಗಳಲ್ಲಿ |
|---|---|---|
| 1. | ಕಬ್ಬಿಣದ ಮಂಚ 100*8000 | 8.00 |
| 2. | ಹಾಸಿಗೆ 100*5000 | 5.00 |
| 3. | ಬೆಡ್‌ಶೀಟ್ಸ್ 100*700 | 0.70 |
| 4. | ತಲೆದಿಂಬುಗಳು ಮತ್ತು ಕವರ್ 100*500 | 0.50 |
| 5. | ಗ್ಯಾಸ್ ಸ್ಟವ್ 04*15000 | 0.60 |
| 6. | ಅಡುಗೆ ಪಾತ್ರೆಗಳು ಅವಶ್ಯಕವಿರುವಷ್ಟು | 3.00 |
| 7. | ಊಟದ ತಟ್ಟೆಗಳು 100*150 | 1.50 |
| 8. | ಸ್ಟೀಲ್ ಲೋಟಗಳು 100*50 | 0.05 |
| | ಒಟ್ಟು | 19.35 |

**ಒಟ್ಟು ಅವಶ್ಯವಿರುವ ಮೊತ್ತ ರೂ.64.35ಲಕ್ಷಗಳು**

ಸದರಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು ಪ್ರಸ್ತುತ 2016–17ನೇ ಸಾಲಿನಲ್ಲಿ ಶಾಲಾ ನಿರ್ವಹಣೆ ಹಾಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನಕ್ಕೆ ರೂ.72.00/–ಲಕ್ಷಗಳ ಅನುದಾನ ನಿಗದಿಯಾಗಿದ್ದು, ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಿದಲ್ಲಿ ಹೆಚ್ಚುವರಿಯಾಗಿ ರೂ.64.35/– ಲಕ್ಷಗಳ ಅನುದಾನದ ಅಗತ್ಯವಿದ್ದು, ಸದರಿ ಶಾಲೆಯಲ್ಲಿ ಸಾಕಷ್ಟು ಸ್ಥಳಾವಕಾಶವಿದ್ದು ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಬಡವರ ಮಕ್ಕಳು, ವಿಕಲಚೇತನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಂಸಧ್ವನಿ ಕಿವುಡ ಮಕ್ಕಳ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಮೇಲೆ ಕ್ರಸಂ.(3)ರಲ್ಲಿ ಓದಲಾದ ದಿನಾಂಕ: 26–04–2016ರ ಪತ್ರದಲ್ಲಿ ಕೋರಿರುತ್ತಾರೆ.

ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಸದರಿ ಶಾಲೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಸಹಮತಿ ನೀಡಿ, ಈ ರೀತಿ ಸರ್ಕಾರವು ವಹಿಸಿಕೊಳ್ಳಲು ಇರುವ ಎಲ್ಲಾ ನಿಯಮಗಳನ್ನು ಪಾಲಿಸಿಯೇ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 389 ಪಿಹೆಚ್‌ಪಿ 2014, ಬೆಂಗಳೂರು, ದಿನಾಂಕ:23.07.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರವು ವಹಿಸಿಕೊಳ್ಳಲು ಇರುವ ಎಲ್ಲಾ ನಿಯಮಗಳನ್ನು ಪಾಲಿಸಿಯೇ ಸರ್ಕಾರದ ವಶಕ್ಕೆ ಪಡೆದು ಹಾಲಿ ಇರುವ ಸಿಬ್ಬಂದಿ ಸಮೇತ, ಚರ, ಸ್ಥಿರ ಆಸ್ತಿ ಒಳಗೊಂಡಂತೆ ಸರ್ಕಾರಿ ವಸತಿಯುತ ಶಾಲೆಯನ್ನಾಗಿ ನಿಯಮಾನುಸಾರ ಮಾರ್ಪಡಿಸಲು ಮಂಜೂರಾತಿಯನ್ನು ನೀಡಲಾಗಿದೆ.

ಇದಕ್ಕೆ ತಗಲುವ ವೆಚ್ಚವನ್ನು 2016-17 ನೇ ಸಾಲಿನ ಲೆಕ್ಕಶೀರ್ಷಿಕೆ:2235-02-101-0-28ರ ಯೋಜನೆಯಡಿ ನಿಗಧಿಪಡಿಸಿರುವ ರೂ136.35ಲಕ್ಷಗಳ ಅನುದಾದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ:166 ವೆಚ್ಚ-10 2016, ದಿನಾಂಕ:17.6.2016ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

23/7/2016
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
2. ಮಹಾಲೇಖಪಾಲರು, (ಇಆರ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ಜಿಲ್ಲಾಧಿಕಾರಿಗಳು, ಬೆಂಗಳೂರು, ನಗರ ಜಿಲ್ಲೆ,
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು. (ಶ್ರೀಮತಿ ನಫೀಸಾ ಸುಲ್ತಾನ, ಸಹ ಶಿಕ್ಷಕಿ ಇವರ ವಿರುದ್ಧ ಕ್ರಮ ಕೈಗೊಂಡು ವರದಿ ಸಲ್ಲಿಸುವುದು)
7. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು.
8. ಉಪ ವಿಭಾಗಾಧಿಕಾರಿಗಳು, ಬೆಂಗಳೂರು, ಉತ್ತರ ಉಪವಿಭಾಗ, ಬೆಂಗಳೂರು
9. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
10. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು.
11. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ-1, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
16. ಶಾಖಾಧಿಕಾರಿ, ಸ್ವೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
17. ಶಾಖಾ ರಕ್ಷಾ ಕಡತ/ಒ.ಡಿ.ಜಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.